# ಹೊಯ್ಸಳರ ಆಡಳಿತ ವ್ಯವಸ್ಥೆ

ಪ್ರಾರಂಭದ ಹೊಯ್ಸಳ ಪ್ರಭುಗಳು ತಲಕಾಡಿನ ಗಂಗರ ಮತ್ತು ಕಲ್ಯಾಣ ಚಾಳುಕ್ಯರ ಆಡಳಿತ ಪದ್ಧತಿಯನ್ನು ಅಳವಡಿಸಿಕೊಂಡಿದ್ದರು. ಮುಂದೆ ರಾಜ್ಯ ವಿಸ್ತಾರವಾಗಿ, ಆಡಳಿತದ ಭಾರ ಹೆಚ್ಚಾಗುತ್ತಿದ್ದಂತೆ ಆಯಾ ಸಂದರ್ಭಕ್ಕೆ ಅನುಕೂಲವಾಗುವಂತೆ, ಮೂಲ ವ್ಯವಸ್ಥೆಗೆ ಭಂಗ ಬರದ ರೀತಿಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಮಾಡಿಕೊಂಡಿದ್ದೂ ಉಂಟು.

ರಾಜ್ಯಾಡಳಿತ ಮೂರು ಘಟ್ಟಗಳಲ್ಲಿ ನಡೆಯುತ್ತಿತ್ತು. ಎಲ್ಲಕ್ಕೂ ಉನ್ನತ ಘಟ್ಟದಲ್ಲಿ ಇಡೀ ರಾಜ್ಯದ ಮೇಲೆ ಅಧಿಕಾರವನ್ನು ಚಲಾಯಿಸುತ್ತಿ ದ್ದವನು ಚಕ್ರವರ್ತಿ. ಈ ರಾಜ್ಯವು ಅನೇಕ ಸಣ್ಣ ವಿಭಾಗಗಳಾಗಿ ವಿಂಗಡಿತವಾಗಿದ್ದು, ಅವುಗಳ ಮೇಲೆ ರಾಜನ ಸಂಬಂಧಿಗಳೋ ದಂಡನಾಯಕರೋ ಅಥವಾ ಸಾಮಂತ ರಾಜವಂಶದವರೋ ಅಧಿಕಾರ ನಡೆಸುತ್ತಿದ್ದರು. ಈ ಪ್ರಾಂತಗಳಲ್ಲಿದ್ದ ಗ್ರಾಮಗಳಲ್ಲಿ ಒಂದೊಂದಕ್ಕೂ ಪ್ರತ್ಯೇಕವಾದ ಸ್ಥಳೀಯ ಆಡಳಿತ ಸಂಸ್ಥೆಗಳಿರುತ್ತಿದ್ದುವು.

ರಾಜ ಆಡಳಿತದ ಸರ್ವಶ್ರೇಷ್ಠ ಅಧಿಕಾರಿಯಾಗಿದ್ದ. ರಾಜತ್ವ ವಂಶಪಾರಂಪರ್ಯವಾಗಿತ್ತು. ಹಿರಿಯ ಮಗ ಉತ್ತರಾಧಿಕಾರಿಯಾಗುತ್ತಿದ್ದ. ಮಂತ್ರಿಗಳನ್ನೂ ಸೇನಾಧಿಕಾರಿಗಳನ್ನೂ ಆಡಳಿತ ಯಂತ್ರದ ಇತರ ಉಚ್ಚ ಅಧಿಕಾರಿಗಳನ್ನೂ ಆರಿಸುವುದು ರಾಜನ ಕರ್ತವ್ಯವಾಗಿತ್ತು. ರಾಜನು ಸರ್ವೋಚ್ಚ ಸೇನಾನಿಯೂ ನ್ಯಾಯಾಧಿಪತಿಯೂ ಆಗಿರುತ್ತಿದ್ದ. ಆದರೆ ಸ್ವೇಚ್ಛಾಧಿಕಾರಿಯಾಗಿರುತ್ತಿರಲಿಲ್ಲ. ಪರಂಪರಾನುಗತವಾದ ಪದ್ಧತಿಗಳು, ಧರ್ಮ, ಮಂತ್ರಿ ಪರಿಷತ್ತು ಮತ್ತು ಇತರ ಅಂಗವ್ಯವಸ್ಥೆಗಳು ರಾಜನ ಸ್ವೇಚ್ಛಾಧಿಕಾರಕ್ಕೆ ಇದ್ದ ತಡೆಗಳಾಗಿದ್ದವು. ಹೊಯ್ಸಳ ರಾಜರು ಧರ್ಮಶಾಸ್ತ್ರಕ್ಕನುಗುಣವಾಗಿ ಆಡಳಿತ ನಡೆಸುವುದು ತಮ್ಮ ಕರ್ತವ್ಯವೆಂದು ನಂಬಿದ್ದರು. ಅನೇಕಾನೇಕ ಶಾಸನಗಳಲ್ಲಿ ಮನು, ಯಾಜ್ಞವಲ್ಕ್ಯ, ಕೌಟಿಲ್ಯ ಮೊದಲಾದ ರಾಜನೀತಿಕರ್ತೃಗಳನ್ನು ಸ್ಮರಿಸಲಾಗಿದೆ. ರಾಜ್ಯ ಸಪ್ತಾಂಗಗ ಳಿಂದ ಕೂಡಿದುದೆಂಬ ನಂಬಿಕೆಯಿತ್ತು. ದುಷ್ಟಶಿಕ್ಷಣ, ಶಿಷ್ಟರಕ್ಷಣ ರಾಜನ ಪ್ರಮುಖ ಕರ್ತವ್ಯವೆಂಬ ನಂಬಿಕೆಯಿತ್ತು. ರಾಜ ಆಗಾಗ ರಾಜ್ಯದಲ್ಲಿ ಸಂಚರಿಸಿ ಪ್ರಜೆಗಳ ಕುಂದುಕೊರತೆಗಳನ್ನು ನಿವಾರಿಸುವುದಲ್ಲದೆ ಗ್ರಾಮ ಮುಂತಾದ ರಾಜ್ಯದ ಉಪಾಂಗಗಳಲ್ಲಿ ಉದ್ಭವಿಸಿದ ಸಮಸ್ಯೆಗಳನ್ನೂ ಪರಿಹರಿಸುತ್ತಿದ್ದ; ಕೆರೆಕಾಲುವೆಗಳನ್ನು ಕಟ್ಟಿಸಿ ಅಗ್ರಹಾರಗಳನ್ನು ಸ್ಥಾಪಿಸಿ ವ್ಯವಸಾಯ, ವ್ಯಾಪಾರ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಿದ್ದ. ಸೇನಾಡಳಿತ: ಹೊಯ್ಸಳ ರಾಜರು ಯುದ್ಧಗಳಲ್ಲಿ ಸ್ವತಃ ಸೈನ್ಯವನ್ನು ನಡೆಸಿ ಪರಾಕ್ರಮದಿಂದ ಹೋರಾಡಿ ಸೈನಿಕರಿಗೆ ಸ್ಫೂರ್ತಿ ನೀಡುತ್ತಿದ್ದರು. ವೀರಯೋಧರನ್ನು ಸನ್ಮಾನಿಸುತ್ತಿದ್ದರು.

ರಾಣಿಯರ ಪಾತ್ರ: ಹೊಯ್ಸಳರ ಆಡಳಿತ ವ್ಯವಸ್ಥೆಯಲ್ಲಿ ರಾಣಿಯರು ಜವಾಬ್ದಾರಿಯುತ ವಾದ ಪಾತ್ರವನ್ನು ವಹಿಸುತ್ತಿದ್ದರು. ಪಟ್ಟಮಹಿಷಿ ಮತ್ತು ಇತರ ರಾಣಿಯರು ವಿಷ್ಣುವರ್ಧನನ ಆಳಿಕೆಯ ಪ್ರಾರಂಭದಿಂದ ಹೊಯ್ಸಳ ಸಂತತಿಯ ಕೊನೆಯವರೆಗೂ ಆಡಳಿತದಲ್ಲಿ ಪಾಲ್ಗೊಂಡಿದ್ದ ಸಾಕಷ್ಟು ನಿದರ್ಶನಗಳು ಶಾಸನಗಳಿಂದ ತಿಳಿದುಬರುತ್ತವೆ.

ಯುವರಾಜ ನೇಮಕ & ತರಬೇತಿ: ಉತ್ತರಾಧಿಕಾರಿಯಾಗಲಿದ್ದ ಹಿರಿಯ ಮಗನಿಗೆ ಬಾಲ್ಯದಲ್ಲಿಯೇ ಅಥವಾ ಹುಟ್ಟಿದಂದಿನಿಂದಲೇ ಯುವರಾಜ್ಯಾಭಿಷೇಕ ಮಾಡುವುದು ಹೊಯ್ಸಳ ಸಂತತಿಯಲ್ಲಿ ಆಚರಣೆಯಲ್ಲಿತ್ತು. ಯುವರಾಜನಿಗೆ ಯೋಗ್ಯ ಶಿಕ್ಷಣ ವ್ಯವಸ್ಥೆ ಮಾಡಲಾಗುತ್ತಿತ್ತು. ಪ್ರಾಪ್ತವಯಸ್ಕನಾದ ಕೂಡಲೇ ಅವನನ್ನು ಪ್ರಾಂತಾಧಿಕಾರಿಯಾಗಿ ನೇಮಿಸುತ್ತಿದ್ದರು. ಅವನು ಯುದ್ಧಗ ಳಲ್ಲಿ ಭಾಗವಹಿಸಬೇಕಾಗಿತ್ತು. ಈ ಪದ್ಧತಿಯಿಂದ ಮುಂದೆ ರಾಜನಾಗುವ ಹೊತ್ತಿಗೆ ವ್ಯಕ್ತಿಗೆ ಆಡಳಿತ ಮತ್ತು ಯುದ್ಧವಿದ್ಯೆಯಲ್ಲಿ ಹೆಚ್ಚು ಪರಿಶ್ರಮ ಪಡೆಯಲು ಅನುಕೂಲವಾಗಿದ್ದುದಲ್ಲದೆ ಸಿಂಹಾಸನಕ್ಕಾಗಿ ಅಂತರ್ಯುದ್ಧ ಗಳು ನಡೆಯದಂತೆ ಏರ್ಪಾಡುಗಳನ್ನು ಕಲ್ಪಿಸಿದಂತಾಗುತ್ತಿತ್ತು.

ರಾಜ್ಯದ ಮುಖ್ಯ ಸಮಸ್ಯೆಗಳನ್ನೂ ನ್ಯಾಯ ತೀರ್ಮಾನಕ್ಕೆ ಸಂಬಂಧಿಸಿದ ಕ್ಲಿಷ್ಟ ಸಮಸ್ಯೆಗಳನ್ನೂ ಮಂತ್ರಾಲೋಚನಸಭೆಯಲ್ಲಿ ಚರ್ಚಿಸಿ ನಿರ್ಣಯಿಸ ಲಾಗುತ್ತಿತ್ತು. ಹೊಯ್ಸಳರ ಮಂತ್ರಿ ಪರಿಷತ್ತಿಗೆ ಪಂಚ ಪ್ರಧಾನ ಸಮಿತಿ ಎಂಬ ಹೆಸರಿದ್ದಿತು. ಅಮಾತ್ಯ, ಮಹಾಸಂಧಿವಿಗ್ರಹಿ, ಶ್ರೀಕರಣಾಧಿಕಾರಿ, ಮುಖ್ಯ ದಂಡನಾಯಕ ಮತ್ತು ಹಿರಿಯರ ಭಾಂಡಾರಿ ಹುದ್ದೆಯಲ್ಲಿದ್ದ ಸಚಿವರು ಪಂಚ ಪ್ರಧಾನ ಸಮಿತಿಯ ಸದಸ್ಯರಾಗಿರುತ್ತಿದ್ದರು. ಕಾಲಕ್ರಮೇಣ ರಾಜ್ಯ ಸಾಮ್ರಾಜ್ಯವಾಗಿ ಮಾರ್ಪಟ್ಟು ಹೆಚ್ಚು ಸಂಖ್ಯೆಯಲ್ಲಿ ಸಚಿವರನ್ನೂ ದಂಡನಾಯಕರನ್ನೂ ನೇಮಿಸಿಕೊಳ್ಳಲಾಯಿತು. ದಕ್ಷತೆ, ಪ್ರಾಮಾಣಿಕತೆ, ನಿಷ್ಠೆ ಮತ್ತು ಇತರ ಸದ್ಗುಣಗಳು ಸಚಿವ ಪದವಿಯ ಮುಖ್ಯ ಅರ್ಹತೆಗಳಾಗಿದ್ದುವು. ಹೊಯ್ಸಳ ಅರಸರ ಕಾಲದಲ್ಲಿ ಸಚಿವ ಮತ್ತು ದಂಡನಾಯಕರಾಗಿದ್ದ ಅನೇಕ ವ್ಯಕ್ತಿಗಳು ವಿದ್ಯೆ, ವಿನಯ ಸಂಪನ್ನರೂ ದೂರದೃಷ್ಟಿಯುಳ್ಳವರೂ ದಕ್ಷಯೋಧರೂ ಆಡಳಿತಗಾರರೂ ಆಗಿದ್ದರು. ಇವರಲ್ಲದೆ, ಅನೇಕ ಆಡಳಿತಾಂಗಗಳಿಗಾಗಿ ಹೆಗ್ಗಡೆ, ಮಹಾಪಸಾಯತ, ಸಂಧಿವಿಗ್ರಹಿ, ಸೇನಬೋವ, ಸೈನ್ಯ ವಿಭಾಗಗಳಿಗೆ ದಂಡನಾಯಕ, ಸೇನಾಪತಿ, ಸಾಹಣಿ, ಮಾವಂತರೂ ರಾಜನ ಸ್ವಂತ ಕಾವಲಿಗೆ ಗರುಡರೂ ಇರುತ್ತಿದ್ದರು.

ಆದಾಯ-ವೆಚ್ಚ:- ಅರಮನೆ ಅಧಿಕಾರಿಗಳು, ಸೈನ್ಯ, ಜನೋಪಕಾರಿ ಕೆಲಸಗಳು ಮುಂತಾದ ರಾಜ್ಯದ ವೆಚ್ಚಕ್ಕಾಗಿ ಭೂಕಂದಾಯ, ರಾಜನ ಸ್ವಂತ ಭೂ ಆಸ್ತಿಯಿಂದ ಬರುವ ಉತ್ಪನ್ನ, ನಿಧಿನಿಕ್ಷೇಪಗಳು, ಚಿನ್ನ, ಕಬ್ಬಿಣದ ಗಣಿಗಳು, ಹಲವು ರೀತಿಯ ಸುಂಕಗಳು, ಕಪ್ಪಕಾಣಿಕೆಗಳು, ಜುಲ್ಮಾನೆಗಳು ಇವು ಮುಖ್ಯ ಆದಾಯ ಮೂಲಗಳಾಗಿದ್ದುವು.

ಪ್ರಾಂತೀಯ ಆಡಳಿತ:- ರಾಜ್ಯವನ್ನು ನಾಡುಗಳಾಗಿ ವಿಂಗಡಿಸಲಾಗಿತ್ತು. ಮೈಸೆನಾಡು, ಕಬ್ಬಾಹುನಾಡು, ತಳಿಗೆನಾಡು ಮುಂತಾದ ನಾಡುಗಳ ಹೆಸರುಗಳನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಸಚಿವ ಮತ್ತು ದಂಡನಾಯಕರನ್ನೂ ರಾಜಕುಮಾರರನ್ನೂ ರಾಣಿಯರನ್ನೂ ನಾಡುಗಳ ಅಥವಾ ನಾಡುಕೂಟಗಳ ಮೇಲ್ವಿಚಾರಣೆಗೆ ನೇಮಿಸಲಾಗುತ್ತಿತ್ತು. ನಾಡ ಗೌಡ ಮತ್ತು ನಾಡ ಹೆಗ್ಗಡೆ ಎಂಬ ಅಧಿಕಾರಿಗಳು ಈ ನಾಡುಗಳ ಉಪವಿಭಾಗಗಳಲ್ಲಿ ಇರುತ್ತಿದ್ದರು.

ಪ್ರಾಂತ್ಯಾದಿಕಾರಿಗಳು ತಮ್ಮ ಆಡಳಿತ ವರ್ಗದಲ್ಲಿ ಪ್ರಧಾನಿ, ಹೆಗ್ಗಡೆ, ಸೇನಾಪತಿ, ದಂಡನಾಯಕ ಮುಂತಾದವರನ್ನು ಒಳಗೊಂಡಿದ್ದು ವ್ಯವಸ್ಥೆ ಮತ್ತು ಆಚರಣೆಯಲ್ಲಿ ರಾಜನ ಚಿಕ್ಕ ಪ್ರತಿಬಿಂಬದಂತೆ ಇರುತ್ತಿದ್ದರು. ರಾಜ ಸರ್ವೋಚ್ಚನಾಗಿದ್ದರೆ

ಇವರು ಅವನ ಅಧೀನರೆಂಬುದಷ್ಟೇ ವ್ಯತ್ಯಾಸ. ಇವರಿಗೂ ಸ್ವಂತ ಭೂ ಆಸ್ತಿಗಳಲ್ಲದೆ, ಹಲವು ವಿಶಿಷ್ಟ ಕಂದಾಯ ಸುಂಕಗಳು ಆದಾಯ ಮೂಲಗಳಾಗಿದ್ದುವು. ದೊಡ್ಡ ದೊಡ್ಡ ಪಟ್ಟಣಗಳ ಆಡಳಿತಕ್ಕಾಗಿ ಪುರಸಭೆಗಳಿದ್ದುವು. ದೋರಸಮುದ್ರ, ಅರಸೀಕೆರೆ, ಶ್ರವಣಬೆಳಗೊಳ, ಬಳ್ಳಿಗಾಮೆ ಮೊದಲಾದ ಪಟ್ಟಣ ಸಭೆಗಳ ಹಾಗೂ ಆಡಳಿತ ಮುಖ್ಯರ ಹೆಸರುಗಳು ಶಾಸನಗಳಲ್ಲಿ ದೊರೆಯುತ್ತವೆ. ಉದಾಹರಣೆಗೆ ವಿಷ್ಣುವರ್ಧ ನನ ಕಾಲದಲ್ಲಿ ಹೊಯ್ಸಳ ಸೆಟ್ಟಿ ಎಂಬವನು ದೋರಸಮುದ್ರದ ಆಡಳಿತ ಸಭೆಯ ಮುಖ್ಯನಾಗಿದ್ದ. ವೀರಬಲ್ಲಾಳನ ಕಾಲದಲ್ಲಿ ಮೇಚಿಸೆಟ್ಟಿ ಎಂಬವನು ಬಳ್ಳಿಗಾಮೆಯ ಪಟ್ಟಣ ಸಭೆಯ ಅಧ್ಯಕ್ಷನಾಗಿದ್ದ. ಗ್ರಾಮಗಳಲ್ಲಿ ಗವುಂಡ (ಗೌಡ) ಅಥವಾ ಹೆಗ್ಗಡೆ ಮುಖ್ಯಾಧಿಕಾರಿಯಾ ಗಿರುತ್ತಿದ್ದ. ಅವನ ಸಹಾಯಕ್ಕೆ ಲೆಕ್ಕಪತ್ರಗಳನ್ನಿಡಲು ಕರಣಿಕನಿರುತ್ತಿದ್ದ. ತಳವಾರ ಹುದ್ದೆಯೂ ಆಗಿನ ಕಾಲದಲ್ಲಿದ್ದುದಾಗಿ ಬಳ್ಳಿಗಾಮೆಯ ಶಾಸನವೊಂದರಿಂದ ತಿಳಿದುಬರುತ್ತದೆ. ಗ್ರಾಮಗಳ ಅಭ್ಯುದಯಕ್ಕಾಗಿ ಗ್ರಾಮಸಭೆ ಅಥವಾ ಪಂಚಾಯಿತಿ ಸಭೆ ಇದ್ದಿತು. ದೇವಾಲಯಗಳು, ಗೋಮಾಳ, ಸಾರ್ವಜನಿಕ ರಸ್ತೆಗಳು, ಕೆರೆಗಳು ಮುಂತಾದವುಗಳ ಮೇಲ್ವಿಚಾರಣೆಯನ್ನು ಗ್ರಾಮಸಭೆಗಳು ನೋಡಿಕೊಳ್ಳುತ್ತಿದ್ದುವು. ಅಗ್ರಹಾರ ಗಳ ಆಡಳಿತಕ್ಕೆ ಮಹಾಜನ ಸಭೆ ಇರುತ್ತಿತ್ತು. ಅನೇಕ ವೃತ್ತಿಗಳ ಮೇಲಿನ ಸುಂಕಗಳು, ಗ್ರಾಮದಲ್ಲಿ ನಡೆಯುವ ವ್ಯಾಪಾರದ ಮೇಲೆ ಸುಂಕ, ಜಾನುವಾರುಗಳು ಮತ್ತು ಇತರ ಬಾಬುಗಳ ಮೇಲಿನ ಸುಂಕಗಳಿಂದ ಗ್ರಾಮ-ನಗರಾಡಳಿತಗಳು ನಡೆಯುತ್ತಿದ್ದುವು.

ಆರ್ಥಿಕ-ಸಾಮಾಜಿಕ ಸ್ಥಿತಿ : ಈ ಕಾಲದಲ್ಲಿ ರಾಜ್ಯ ಸುಭಿಕ್ಷವಾಗಿತ್ತು. ರಾಜ್ಯದ ಆದಾಯದ ಹೆಚ್ಚಿನ ಪಾಲು ಕೃಷಿ, ವ್ಯಾಪಾರ ಕ್ಷೇತ್ರಗಳಿಂದ ಸಲ್ಲುತ್ತಿತ್ತು. ಪ್ರಜೆಗಳು ತೆರಬೇಕಾಗಿದ್ದ ತೆರಿಗೆಗಳು ಹಲವಿದ್ದುವು. ಭೂಕಂದಾಯ, ವ್ಯಾಪಾರ ಸಂಬಂಧದ ತೆರಿಗೆಗಳ ಜೊತೆಗೆ ವೃತ್ತಿತೆರಿಗೆ, ಜಾತಿತೆರಿಗೆ, ಸಾಮಾಜಿಕ ಸಮಾರಂಭಗಳ ಮೇಲೆ ವಿಧಿಸಲಾಗುತ್ತಿದ್ದ ತೆರಿಗೆ ಮುಂತಾದವೂ ಇದ್ದುವು. ಗದ್ಯಾಣ, ಹಣ, ಹಾಗ, ಅಡ್ಡ, ಬೇಳೆ ಮುಂತಾದ ವಿವಿಧ ಮೌಲ್ಯದ ನಾಣ್ಯಗಳು ಚಲಾವಣೆಯಲ್ಲಿ ಇದ್ದುವು. ಖಂಡುಗ, ಸಲಗೆ, ಕೊಳಗ, ಕಂಬ, ಬಳ್ಳ, ಮಾನ ಮುಂತಾದವು ಅಳತೆಯ ಮಾನಗಳು. ನಿಯತವಾಗಿ ಭೂಮಾಪನ ನಡೆಯುತ್ತಿತ್ತು. ಭೂ ವಿವಾದ ಉಂಟಾದಾಗ ಹೊಸದಾಗಿ ಭೂಮಾಪನ ನಡೆಯುತ್ತಿತ್ತು.

(-*-*-*-*-)